# ಯಹೂದಿಗಳು ಮತ್ತು ಪ್ಯಾಲೆಸ್ಟೀನ್

ಯಹೂದಿಗಳ ಬಿಕ್ಕಟ್ಟಿನ ಬಗ್ಗೆ ನನ್ನ ನಿಲುವೇನೆಂಬುದನ್ನು ತಿಳಿಸಬೇಕೆಂದು ಕೋರಿ ಅನೇಕರು ಬರೆದ ಪತ್ರಗಳು ನನ್ನ ಕೈಸೇರಿವೆ. ಜರ್ಮನಿಯಲ್ಲಿ ಯಹೂದಿಗಳ ಮೇಲೆ ನಡೆದಿರುವ ಹಿಂಸಾಚಾರದ ಬಗ್ಗೆಯೂ ಪ್ರತಿಕ್ರಿಯಿಸಬೇಕೆಂದು ಅವುಗಳಲ್ಲಿ ಕೋರಲಾಗಿದೆ.

ಯಹೂದಿಗಳ ಬಗ್ಗೆ ನನಗೆ ಅಪಾರ ಸಹಾನುಭೂತಿಯಿದೆ. ನಾನು ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗಿನಿಂದ ಅವರ ನಿಕಟ ಪರಿಚಯವೂ ನನಗುಂಟು. ಅವರಲ್ಲಿ ಕೆಲವರು ನನ್ನ ಚಿರಕಾಲದ ಗೆಳೆಯರಾಗಿಬಿಟ್ಟಿದ್ದಾರೆ. ಈ ಗೆಳೆಯರ ಮೂಲಕವೇ ಶತಮಾನಗಳಿಂದ ಯಹೂದಿಗಳ ಮೇಲೆ ನಡೆಯುತ್ತ ಬಂದಿರುವ ದೌರ್ಜನ್ಯದ ಕುರಿತು ನನಗೆ ತಿಳಿದುಬಂದಿದ್ದು. ಯಹೂದಿಗಳು ಕ್ರಿಶ್ಚಿಯನ್ ಜಗತ್ತಿನ ಶೋಷಿತರು. ಭಾರತದಲ್ಲಿ ಹಿಂದೂಗಳು ಅಸ್ಪೃಶ್ಯರೊಂದಿಗೆ ನಡೆದುಕೊಂಡ ಹಾಗೆಯೇ ಬಹಳ ಮಟ್ಟಿಗೆ ಕ್ರಿಶ್ಚಿಯನ್ನರೂ ಯಹೂದಿಗಳೊಂದಿಗೆ ನಡೆದುಕೊಂಡಿದ್ದಾರೆ.

ಯಹೂದಿಗಳ ಕುರಿತು ನನಗೆ ಸಹಾನುಭೂತಿಯಿದೆ ಅಂದೆ. ಈ ಸಹಾನುಭೂತಿ ನ್ಯಾಯಾನ್ಯಾಯಗಳ ಬಗೆಗಿನ ನನ್ನ ಪರಿವೆಯನ್ನು ಮಂದಗೊಳಿಸಬೇಕಿಲ್ಲ. ತಾಯ್ನೆಲಕ್ಕಾಗಿ ಯಹೂದಿಗಳು ಹಾಕುತ್ತಿರುವ ಕೂಗು ಸಮರ್ಥನೀಯವಾದುದು ಎಂದೇನೂ ನನಗನಿಸುತ್ತಿಲ್ಲ. ಯಹೂದಿಗಳು ಈ ವಿಷಯದಲ್ಲಿ ಅಡ್ಡದಾರಿ ಹಿಡಿದಿದ್ದಾರೆ ಎಂದೇ ಭಾಸವಾಗುತ್ತಿದೆ.

ಪ್ಯಾಲೆಸ್ಟೀನ್ ಮೇಲಿನ ತಮ್ಮ ಹಕ್ಕೊತ್ತಾಯಕ್ಕೆ ಯಹೂದಿಗಳು ಆಶ್ರಯಿಸಿರುವುದು ಬೈಬಲ್ ಕಥನವನ್ನು. ತಮ್ಮ ಪಾಲಿಗೆ ಪ್ರತ್ಯೇಕ ತಾಯ್ನೆಲವೊಂದು ಇರಬೇಕೆಂದು ಅವರು ಪಟ್ಟು ಹಿಡಿದಿರುವುದಕ್ಕೆ ಇನ್ನಿಲ್ಲದೆ ಹಾತೊರೆದಿರುವುದಕ್ಕೆ ಇದೇ ಮೂಲ! ತಾವು ನೆಲೆಸಿರುವ, ತಾವು ಬದುಕು ಕಟ್ಟಿಕೊಂಡಿರುವ ನಾಡನ್ನು ಸ್ವಂತ ನಾಡನ್ನಾಗಿ ಪರಿವರ್ತಿಸಿಕೊಳ್ಳುವ ದಿಸೆಯಲ್ಲಿ ಯಹೂದ್ಯರಿಗೆ ಎದುರಾಗಿರುವ ಅಡ್ಡಿಯೇನು?

ಯಹೂದಿಗಳು ಪ್ರತಿಪಾದಿಸುತ್ತಿರುವ ಹಾಗೆ ಬೈಬಲ್ ಗ್ರಂಥದಲ್ಲಿ ಪ್ಯಾಲೆಸ್ಟೀನ್‌ನ ಭೌಗೋಳಿಕ ಎಲ್ಲೆಯೇನೂ ಸೂಚಿತವಾಗಿಲ್ಲ. ಆ ನಾಡಿನ ಕಲ್ಪಿತ ಭೂಪಟವಿರುವುದು ಯಹೂದ್ಯರ ಮನಸ್ಸುಗಳಲ್ಲಿ. ಅದರ ಗಡಿಗೆರೆಗಳನ್ನು ಬ್ರಿಟಿಷರ ಬಂದೂಕಿನ ಇಶಾರೆಯಲ್ಲಿ ನಿರ್ಧರಿಸಿಕೊಂಡು ಪ್ಯಾಲೆಸ್ಟೀನ್ ಮೇಲೆ ಹಕ್ಕು ಸಾಧಿಸಲು ತೊಡಗಿರುವ ಯಹೂದಿಗಳ ನಡೆ ಸಮಂಜಸವೆನಿಸುವುದಿಲ್ಲ. ಯಹೂದಿಗಳೇ ಸಾರಿಕೊಳ್ಳುತ್ತಿರುವ ಅವರ ಈ ಧಾರ್ಮಿಕ ನಡೆ ಬಂದೂಕು, ಬಾಂಬುಗಳ ನೆರವಿನಿಂದ ರೂಪುಗೊಳ್ಳಬೇಕಾದ್ದಿಲ್ಲ.

ಅರಬ್ಬರೊಂದಿಗೆ ಸೌಹಾರ್ದಯುತವಾಗಿ ಅವರು ಈ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳುವುದು ಒಳಿತು. ಈ ನಿಟ್ಟಿನಲ್ಲಿ ಅರಬ್ಬರ ಹೃದಯ ಪರಿವರ್ತನೆಗೆ ಯಹೂದಿಗಳು ಯತ್ನಿಸಬಹುದು. ಎಷ್ಟಾದರೂ ಯಹೂದಿಗಳ ಹೃದಯದಲ್ಲಿ ನೆಲೆಸಿರುವ ದೇವರು ಅರಬ್ಬರ ಹೃದಯದಲ್ಲೂ ನೆಲೆಸಿದ್ದಾನಷ್ಟೆ!

(ನವೆಂಬರ್ 20, 1938)